# ಹೊಂಚುಗಾರ ದರೋಡೆ ನೊಣ



**ಕಳ್ಳ ನೊಣ, ಕೊಳ್ಳಿ ನೊಣ ಎಂಬ ನಾನಾ ಹೆಸರುಗಳಿಂದ ಕರೆಸಿಕೊಳ್ಳುವ ದರೋಡೆ ನೊಣದ ಶಿಕಾರಿ ಕಥೆ.**

**ಶಶಿಧರಸ್ವಾಮಿ ಆರ್. ಹಿರೇಮಠ**

ಕುರುಚಲು ಕಾಡಂಚಿನ ಹುಲ್ಲುಗಾವಲು ಪ್ರದೇಶ. ಕಿವಿಗಳಿಗೆ ರಾಚುವ ಕೀಟಗಳ ಗುಯ್‌ಗುಡುವ ಸದ್ದು. 'ದರೋಡೆ ನೊಣ'ಗಳು ಹುಲ್ಲಿನ ಎಳೆಯಲ್ಲಿ ಹೊಂಚುಹಾಕಿ ಕೂರುತ್ತಿರುವ ದೃಶ್ಯ ಕಂಡಾಗ, ಅವುಗಳನ್ನು ನೋಡಲು ಕುಳಿತೆ.

ಐದಾರು ನಿಮಿಷ ಕಳೆದಿರಬೇಕು. ದರೋಡೆ ನೊಣವೊಂದು ಹುಲ್ಲಿನ ಕಡ್ಡಿಯೊಳಗಿಂದ ತನ್ನ ಪಾರದರ್ಶಕ ರೆಕ್ಕೆಗಳನ್ನು ರಭಸವಾಗಿ ಬಡಿಯುತ್ತ ನಾಲ್ಕು ಕಾಲುಗಳನ್ನು ಮುಂಚಾಚುತ್ತಾ ಹಾರಿ ಬಂತು.

ದರೋಡೆ ನೊಣಗಳನ್ನು ಕಳ್ಳ ನೊಣ, ಕೊಳ್ಳಿ ನೊಣ, ಹಂತಕ ನೊಣ ಎಂಬ ನಾನಾ ಹೆಸರುಗಳಿಂದ ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ 'ರಾಬರ್ ಫ್ಲೈ' (Robber Fly) ಅಥವಾ 'ಅಸಾಸಿನ್ ಫ್ಲೈ' (Assassin Fly) ಎಂದು ಕರೆಯುತ್ತಾರೆ. ಕೀಟ ವರ್ಗದ, ಅಸಿಲಿಡೆ ಕುಟುಂಬಕ್ಕೆ ಇದನ್ನು ಸೇರಿಸಲಾಗಿದೆ. ಸುಮಾರು 1ರಿಂದ 1.5 ಸೆಂ. ಮೀ. ನಷ್ಟು ಉದ್ದ ಬೆಳೆಯುತ್ತದೆ. ಮುಖದಲ್ಲಿ ದಟ್ಟವಾದ ಬಿರುಗೂದಲ ಸಮೂಹದಿಂದ ಗಡ್ಡಧಾರಿಗಳಂತೆ ಕಾಣಿಸುತ್ತದೆ.

**ಬೇಟೆಗೆ ಹೊಂಚು:** ಇದು ಹುಲ್ಲು, ಗಿಡದ ಟೊಂಗೆ, ಪೈರಿನ ಎಲೆಯ ಮೇಲೆ ಕೀಟಗಳನ್ನು ಬೇಟೆಯಾಡಲು ಹೊಂಚುಹಾಕಿ ಕುಳಿತಿರುತ್ತದೆ.



ಸಾವಿರಾರು ಪಟ್ಟಕಗಳಿಂದ ಕೂಡಿರುವ ಕಣ್ಣಾದ ಸಂಯುಕ್ತಾಕ್ಷಿಗಳನ್ನು ಹೊಂದಿದ್ದು, ಬೇಟೆಯ ಚಲನವಲನವನ್ನು ಬಲು ಬೇಗ ಗ್ರಹಿಸಿಬಿಡುತ್ತದೆ. ಹಾರುವ ಕೀಟವನ್ನು ಬೆನ್ನತ್ತಿ ತನ್ನ ಕೊಳವೆಯಾಕಾರದ ಬಾಯಿಯಿಂದ ಅದನ್ನು ಚುಚ್ಚಿ, ಮೂರ್ಛೆಗೊಳಿಸುವ ಎಂಜಲು ದ್ರವವನ್ನು ಹರಿಸಿ ಅದರ ನರವ್ಯೂಹವನ್ನು ಗಾಸಿಗೊಳಿಸಿ ಪಾರ್ಶ್ವವಾಯುವಿಗೆ ತುತ್ತಾಗುವಂತೆ ಮಾಡುತ್ತದೆ. ಹತ್ತಿರದಲ್ಲಿನ ಸಸ್ಯಗಳ ಮೇಲೆ ಕುಳಿತು ಬೇಟೆಯಾಡಿದ ಕೀಟದ ರಸಾಹಾರ ಹೀರಿ ಹೊಟ್ಟೆ ತುಂಬಿಸಿಕೊಂಡು ತೃಪ್ತಿಪಡುತ್ತದೆ.

ನಾನು ನೋಡುತ್ತಿದ್ದಾಗ, ದರೋಡೆ ನೊಣವು ಹಸಿರುಮೂತಿ ಹುಳುವನ್ನು ಬೇಟೆಯಾಡಲು ಹೊಂಚುಹಾಕುತ್ತಿತ್ತು. ಥಟ್ಟನೆ ಅದನ್ನು ಹಿಡಿದು, ಹತ್ತಿರದಲ್ಲಿದ್ದ ಗಿಡದ ಜೋತು ಬಿದ್ದ ಎಲೆಯ ತೊಟ್ಟಿನ ಮೇಲೆ ಕುಳಿತು ರಸಾಹಾರ ಹೀರತೊಡಗಿತು. ಹೊಟ್ಟೆ ತುಂಬಲಿ, ಬಿಡಲಿ, ಸಿಕ್ಕ ಬೇಟೆಯ ದೇಹದ ರಸಾಹಾರ ಮುಗಿಯುವವರೆಗೂ ಅದನ್ನು ಶುಂಡದಿಂದ ಬಿಡುವುದಿಲ್ಲ. ಸುಮಾರು ಹದಿನೈದು ನಿಮಿಷದ ನಂತರ, ಬಾಯಿಯಿಂದ ಜೊಳ್ಳಾದ ಮೂತಿಹುಳುವನ್ನು ಕೆಳಗೆ ಬೀಳಿಸಿ ಹಾರಾಡುತ್ತಾ ಮಾಯವಾಯಿತು.